**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಎಸ್.ಸಿ. ನಂ. 5017/2022**

**ಪ್ರಾಸಾ -- 4**

**ಚಾಸಾ – 7**

ಸಾಕ್ಷಿಯ ಹೆಸರು– ಚಂಗಪ್ಪ

ತಂದೆಯ ಹೆಸರು – ನಂಜಪ್ಪ

ವಯಸ್ಸು – 72 ವರ್ಷ

ವೃತ್ತಿ – ವ್ಯವಸಾಯ

ವಿಳಾಸ – ವಿ ಬಾಡಗ ಗ್ರಾಮ

ದಿಃ 23.08.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ನನಗೆ ವಿ ಬಾಡಗ ಗ್ರಾಮದಲ್ಲಿ ಕಾಫಿ ತೋಟ ಇದೆ. ಸದರಿ ಕಾಫಿ ತೋಟದಲ್ಲಿ ಲೈನ್ ಮನೆಗಳು ಇವೆ. ನಮ್ಮ ಕಾಫಿ ತೋಟದ ಲೈನ್ ಮನೆಯಲ್ಲಿ ಆರೋಪಿ ಸುಬ್ರಮಣಿಯವರ ತಂದೆ ತಾಯಿ ವಾಸವಾಗಿದ್ದರು ಹಾಗೂ ಆರೋಪಿ ಸುರೇಶ್ ವಾಸವಾಗಿದ್ದರು. ಲೈನ್ ಮನೆಯ ಒಂದು ಭಾಗದಲ್ಲಿ ಆರೋಪಿ ಸುರೇಶ್ ವಾಸವಾಗಿದ್ದು ಇನ್ನೊಂದು ಭಾಗದಲ್ಲಿ ಆರೋಪಿ ಸುಬ್ರಮಣಿಯವರ ತಂದೆ ತಾಯಿ ವಾಸವಾಗಿದ್ದರು.

2. ದಿಃ 03.03.2022 ರಂದು ಪೊಲೀಸರು ನನ್ನ ಮನೆಗೆ ಬಂದು ನನ್ನ ತೋಟದ ಲೈನ್ ಮನೆಯಲ್ಲಿ ಯಾರು ವಾಸವಾಗಿದ್ದಾರೆ ಎಂದು ಕೇಳಿದ್ದು ನಾನು ನಮ್ಮ ಲೈನ್ ಮನೆಯ ಒಂದು ಭಾಗದಲ್ಲಿ ಮಾದ ಹಾಗೂ ಕಾಳಿ ವಾಸವಾಗಿದ್ದರು ಹಾಗೂ ಇನ್ನೊಂದು ಭಾಗದಲ್ಲಿ ಸುರೇಶ್ ವಾಸವಾಗಿದ್ದರು ಎಂದು ಹೇಳಿದೆ. ನನ್ನ ಸೋದರ ಸಬಂಧಿ ಪೂಣಚ್ಚರವರ ಲೈನ್ ಮನೆಯಲ್ಲಿ ಮೃತಪಟ್ಟ ಮಹಿಳೆ ವಾಸವಾಗಿದ್ದರು. ಪೊಲೀಸರು ಆ ದಿನ ಸಂಜೆ 5.00 ಗಂಟೆಗೆ ಆರೋಪಿ ಸುಬ್ರಮಣಿಯನ್ನು ಕರೆದುಕೊಂಡು ಬಂದಿದ್ದರು. ಆರೋಪಿಗಳು ಆ ಮಹಿಳೆಯನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿದ್ದಾರೆ ಎಂದು ಹೇಳಿದ್ದರು. ಪೊಲೀಸರು ಆ ಮಹಿಳೆ ವಾಸವಾಗಿದ್ದ ಲೈನ್ ಮನೆಯ ಬಳಿ ಹೋಗಿ ಪರಿಶೀಲನೆ ಮಾಡಿದಾಗ ಬೆಡ್ ನ ಕೆಳಗಡೆ ಆರೋಪಿ ಸುರೇಶ್ ರವರ ಮೊಬೈಲು ಪೊಲೀಸರಿಗೆ ಸಿಕ್ಕಿತು. ಸದರಿ ಮೊಬೈಲನ್ನು ಪೊಲೀಸರು ಜಪ್ತು

ಮಾಡಿದ್ದರು, ಬೇರೆ ಯಾವುದೇ ವಸ್ತುಗಳನ್ನು ನನ್ನ ಸಮಕ್ಷಮ ಜಪ್ತು ಮಾಡಿರಲಿಲ್ಲ. ನಾನು ಮೃತ ಮಹಿಳೆಯ ಶವವನ್ನು ನೋಡಿರಲಿಲ್ಲ. ದಿಃ 04.03.2022 ರಂದು ಪೊಲೀಸರು ಒಂದು ಪಂಚನಾಮೆ ಮಾಡಿದ್ದರು ಹಾಗೂ ಪಂಚನಾಮೆಗೆ ನನ್ನ ಸಹಿಯನ್ನು ಪಡೆದುಕೊಂಡಿದ್ದರು. ಈಗ ತೋರಿಸಿದ ನೊಟೀಸಿನಲ್ಲಿ ನನ್ನ ಸಹಿ ಇದೆ. ಸದರಿ ನೋಟೀಸನ್ನು ನಿಪಿ 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ 10(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ನಿಪಿ 5 ಸ್ಥಳ ಮಹಜರಿನಲ್ಲಿ ನನ್ನ ಸಹಿ ಇದೆ. ಸದರಿ ಸ್ಥಳ ಮಹಜರಿನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 5(ಬಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಈಗ ತೋರಿಸಿದ ಮು ಮಾ 2 ಟವಲನ್ನು ಪೊಲೀಸರು ಜಪ್ತು ಮಾಡಿರುವುದಿಲ್ಲ. ಈಗ ತೋರಿಸಿದ ನಿಪಿ 6 ಮತ್ತು 7 ರಲ್ಲಿ ಮೃತ ಚಿಮ್ಮಿರವರ ಮಗ ಟವಲನ್ನು ಹಾಜರುಪಡಿಸುತ್ತಿರುವುದು ಕಾಣಿಸುತ್ತಿದೆ. ನಿಪಿ 6 ಮತ್ತು 7 ರಲ್ಲಿ ನಾನು ಹಾಗೂ ನನ್ನ ಸಹೋದರ ಚಾಸಾ 8 ರವರು ಕಾಣಿಸುತ್ತಿದ್ದೇವೆ.

3. 8 ದಿನಗಳ ಬಳಿಕ ಆರೋಪಿ ಸುರೇಶ್ ನನ್ನು ಪೊಲೀಸರು ಕರೆದುಕೊಂಡು ಬಂದಿದ್ದರು. ಅವನು ವಾಸವಾಗಿದ್ದ ಕೋಣೆಯನ್ನು ಪರಿಶೀಲನೆ ಮಾಡಿದರು. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತು ಮಾಡಿರಲಿಲ್ಲ. ಈಗ ತೋರಿಸಿದ ಮಹಜರಿನಲ್ಲಿ ನನ್ನ ಸಹಿ ಇದೆ. ಸದರಿ ಮಹಜರನ್ನು ನಿಪಿ 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ 11(ಎ) ಎಂದು ಗುರುತಿಸಲಾಯಿತು. ಆರೋಪಿ ಸುರೇಶ ವಾಸವಾಗಿದ್ದ ಕೋಣೆಯನ್ನು ಪರಿಶೀಲನೆ ಮಾಡಿ ನಿಪಿ 11 ನ್ನು ಬರವಣಿಗೆ ಮಾಡಿದ್ದರು. ಪೊಲೀಸರು ಒಂದು ಕತ್ತಿಯನ್ನು ಜಪ್ತು ಮಾಡಿದ್ದರು. ಕತ್ತಿಯಲ್ಲಿ ರಕ್ತದ ಕಲೆ ಇತ್ತು. ಬೇರೆ ಯಾವ ವಸ್ತುಗಳನ್ನು ಜಪ್ತು ಮಾಡಿದ್ದಾರೆ ಎಂದು ನಾನು ನೋಡಿರುವುದಿಲ್ಲ. ಈಗ ತೋರಿಸಿದ ಕತ್ತಿಯನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿದ್ದರು. ಸದರಿ ಕತ್ತಿಯನ್ನು ಮು ಮಾ 3 ಎಂದು ಗುರುತಿಸಲಾಯಿತು. ಮಹಿಳೆ ಇದ್ದ ಕೋಣೆಯಲ್ಲಿ ರಕ್ತದ ಕಲೆಗಳು ಇತ್ತು. ಪೊಲೀಸರು ಆರೋಪಿಗಳನ್ನು ಕರೆದುಕೊಂಡು ಬಂದಿದ್ದ ಬಗ್ಗೆ ಹಾಗೂ ಪಂಚನಾಮೆ ಮಾಡಿದ್ದ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

4. ದಿಃ 03.03.2022 ರಂದು ಪೂಣಚ್ಚರವರ ಕಾಫಿ ತೋಟವನ್ನು ಲೀಜ್ಗೆ ಪಡೆದುಕೊಂಡಿರುವ ಅಜಿತ್ ರವರು ಕಾಣಲು ಸಿಕ್ಕಿದ್ದು ಆತ ನನ್ನೊಂದಿಗೆ ಪೂಣಚ್ಚ ರವರ ಲೈನ್ ಮನೆಯಲ್ಲಿ ವಾಸವಿದ್ದ ಕುಳಿಯನ ಹೆಂಡತಿ ಚಿಮ್ಮಿಗೆ ನಿನ್ನೆ ದಿವಸ ರಾತ್ರಿ ಯಾರೋ ಕುತ್ತಿಗೆಗೆ ಕಡಿದು ಗಾಯಪಡಿಸಿದ್ದು ಆಕೆ ಮಾತನಾಡುವ ಸ್ಥಿತಿಯಲ್ಲಿ ಇಲ್ಲ, ಆಸ್ಪತ್ರೆಗೆ ಕರೆದಕೊಂಡು ಹೋಗಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಿಃ 04.03.2022 ರಂದು ಪೊಲೀಸರು ಬಂದಿದ್ದಾಗ ಕೃತ್ಯ ಸ್ಥಳವನ್ನು ಚಾಸಾ 5 ರವರು ನಮ್ಮ ಸಮಕ್ಷಮ ಪೊಲೀಸರಿಗೆ ತೋರಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ಆಗ ಚಾಸಾ 5 ರವರು ಮೃತ ಚಿಮ್ಮಿಯ ಕುತ್ತಿಗೆಗೆ ಸುತ್ತಿದ್ದ ರಕ್ತದ ಕಲೆ ಇದ್ದ ಮು ಮಾ 2 ಟವಲನ್ನು ಹಾಜರುಪಡಿಸಿದ್ದು, ಅದನ್ನು ಪೊಲೀಸರು ಜಪ್ತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 5 ಮಹಜರನ್ನು ಬೆಃ 11.00 ರಿಂದ ಮಃ 1.00 ಗಂಟೆಯವರೆಗೆ ಮಾಡಿರುತ್ತಾರೆ ಎಂದರೆ ಸರಿ. ದಿಃ 10.03.2022 ರಂದು ಆರೋಪಿ ಸುರೇಶ್ ರವರನ್ನು ಪೊಲೀಸರು ಕರೆದುಕೊಂಡು ಬಂದಿದ್ದರು ಎಂದರೆ ಸಾಕ್ಷಿ ನುಡಿಯುತ್ತಾರೆ ಇಬ್ಬರು ಆರೋಪಿಗಳನ್ನು ಕರೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ಆರೋಪಿ ಸುರೇಶನ ಬಳಿ ನಾನು ವಿಚಾರಿಸಿದಾಗ ಆತ ದಿಃ 02.03.2022 ರಂದು ಆತ ಹಾಗೂ ಸುಬ್ರಮಣಿ ಸೇರಿಕೊಂಡು ಚಿಮ್ಮಿಯನ್ನು ಅತ್ಯಾಚಾರ ಮಾಡಲು ಅವರ ಮನೆಗೆ ಹೋಗಿ ಮಲಗಿದ್ದಲ್ಲಿ ಅತ್ಯಾಚಾರ ಮಾಡಲು ಪ್ರಯತ್ನಿಸಿದಾಗ ಚಿಮ್ಮಿ ವಿರೋಧ ವ್ಯಕ್ತಪಡಿಸಿದ್ದರಿಂದ ಆಕೆಯನ್ನು ಕತ್ತಿಯಿಂದ ಗಂಟಲಿಗೆ ಕಡಿದು ಮಾರಣಾಂತಿಕವಾಗಿ ಗಾಯಗೊಳಿಸಿದ್ದು ತಾನು ಚಿಮ್ಮಿಗೆ ಕಡಿದ ಕತ್ತಿಯನ್ನು ಲೈನ್ ಮನೆಯಲ್ಲಿ ಇಟ್ಟಿದ್ದರಿಂದ ಕತ್ತಿ ಹಾಗೂ ಆ ದಿನ ರಾತ್ರಿ ನಾನು ಧರಿಸಿದ್ದ ಬಟ್ಟೆಯನ್ನು ಪೊಲೀಸರಿಗೆ ಕೊಡಲು ಕರೆದುಕೊಂಡು ಬಂದಿರುವುದಾಗಿ ಸುರೇಶ ನನ್ನ ಬಳಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪೊಲೀಸರು ಸುರೇಶನಿಗೆ ಚಿಮ್ಮಿಗೆ ಕಡಿದು ಗಾಯಗೊಳಿಸಿದ ಕತ್ತಿಯನ್ನು ಹಾಗೂ ಆತ ಆ ದಿನ ಧರಿಸಿದ್ದ ಬಟ್ಟೆಯನ್ನು ಕೊಡುವಂತೆ ಹೇಳಿದಾಗ ಆತ ಹಗ್ಗದ ಮೇಲೆ ನೇತು ಹಾಕಿದ್ದ

ಶರ್ಟ್ ಹಾಗೂ ಪ್ಯಾಂಟನ್ನು ನನ್ನ ಸಮಕ್ಷಮ ಪೊಲೀಸರ ಮುಂದೆ ಹಾಜರುಪಡಿಸರುತ್ತಾರೆ ಎಂದರೆ ಸರಿಯಲ್ಲ. ಅವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಬಿಳಿ ಬಣ್ಣದ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಅರಗು ಹಾಕಿ ಎ ಎಂಬ ಇಂಗ್ಲೀಷ್ ಅಕ್ಷರದ ಸೀಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಹಿ ಇರುವ ಚೀಟಿಯನ್ನು ಸದರಿ ಪ್ಯಾಕ್ ಗಳ ಮೇಲೆ ಅಂಟಿಸಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ನಿಪಿ 11 ಮಹಜರನ್ನು ಮಃ 1.30 ಗಂಟೆಯಿಂದ 3.30 ಗಂಟೆಯವರೆಗೆ ಬರವಣಿಗೆ ಮಾಡಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ದಿಃ 10.03.2022 ರಂದು ನನಗೆ ಈಗ ಓದಿ ಹೇಳಿದಂತೆ " ನಂತರ —— ಚೀಟಿಯನ್ನು ಅಂಟಿಸಿದರು " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 12 ಎಂದು ಗುರುತಿಸಲಾಯಿತು. ನಿಪಿ 12 ರಲ್ಲಿರುವ ಎಲ್ಲ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

5. ನನ್ನ ಸಮಕ್ಷಮ ಜಪ್ತು ಮಾಡಿದ್ದಾರೆ ಎಂದು ಹೇಳಲಾದ ಮೊಬೈಲ್ ಈಗ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ಈಗ ತೋರಿಸಿದ ಕತ್ತಿ ಕಪಾತು ಕತ್ತಿ ಎಂದರೆ ಸರಿ. ಮು ಮಾ 3 ಅಂಗಡಿಗಳಲ್ಲಿ ಹಾಗೂ ಎಲ್ಲಾಕಡೆಗಳಲ್ಲೂ ಸಿಗುತ್ತವೆ ಎಂದರೆ ಸರಿ. ಈಗ ತೋರಿಸಿದ ಮು ಮಾ 3 ರಲ್ಲಿ ರಕ್ತದ ಕಲೆ ಕಾಣಿಸುತ್ತಿಲ್ಲ ಎಂದರೆ ಸರಿ. ನಾನು ಪೊಲೀಸರ ಸಮಕ್ಷಮ ಹೇಳಿಕೆ ನೀಡಿಲ್ಲ ಎಂದರೆ ಸರಿ. ಪೊಲೀಸರು ಏನೇನು ಬರವಣಿಗೆ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು 2-3 ಸಹಿಗಳನ್ನು ಮಾಡಿರುತ್ತೇನೆ. ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೆ ಎಂದರೆ ಸರಿ. ನಾನು 4 ನೇ ತಾರೀಖಿಗೆ 2 ದಾಖಲೆಗೆ ಸಹಿ ಮಾಡಿದ್ದೆ, 10 ನೇ ತಾರೀಖಿಗೆ ಒಂದು ದಾಖಲೆಯಲ್ಲಿ ಸಹಿ ಮಾಡಿದ್ದೆ. ಮಹಜರು ಮಾಡುವ ಸಮಯದಲ್ಲಿ ಯಾರು ಯಾರು ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಪೊ. ಠಾಣೆಗೆ ಹೋಗಿ ನಿಪಿ 5 ಹಾಗೂ 11 ರಲ್ಲಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಪೊಲೀಸರಿಂದ ನನಗೆ ತೊಂದರೆಯಾಗಬಹುದು ಎನ್ನುವ ಕಾರಣಕ್ಕೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)